**ಸಾಕ್ಷಿಯನ್ನು ದಿಃ <u>29/05/2023</u> ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**<u>ಪಾಟೀ ಸವಾಲು ಃ 2 ನೇ ವಾದಿ(ಈ ಮುಂಚೆ ಪ್ರತಿವಾದಿಯಾಗಿದ್ದರು) ಪರ ವಕೀಲರಿಂದ.</u>**

ಈ ಮುಂಚೆ ನಾವುಗಳು ಪ್ರತಿವಾದಿಗಳಾಗಿದ್ದು ಈಗ ವಾದಿ ನಂಃ3 ಎಂದು ಬದಲಾವಣೆಯಾಗಿದ್ದು ಇರುತ್ತದೆ ಎಂದರೆ ಸರಿ. ನನ್ನ ತಂದೆ ಮತ್ತು ಚಿಕ್ಕಪ್ಪ ಅರವಿಂದ ಅವರು ಮಾಡಿರುವ ವ್ಯಾಜ್ಯ ಸಂಗತಿಗಳು ನನಗೆ ಗೊತ್ತಿರುತ್ತದೆ. ಪ್ರತಿವಾದಿ ನಂಃ13 ವಾಸುದೇವ ರೇಗೆ ಇವರು 2015 ನೇ ಇಸವಿಯ ನವೆಂಬರ್ ಅಥವಾ ಡಿಸೆಂಬರ್ ನಲ್ಲಿ ಮೃತ ಪಟ್ಟಿರುತ್ತಾರೆ. ಇವರ ಪತ್ನಿ ಪ್ರತಿವಾದಿ ನಂಃ13(ಎ) ಸಹ ತೀರಿಕೊಂಡಿರುತ್ತಾರೆ. ನಮ್ಮ ವ್ಯಾಪಾರ ವ್ಯವಹಾರಗಳು ಪರಸ್ಪರ ಹೊಂದಾಣಿಕೆ ಮೇಲೆ ಹಣಕಾಸಿನ ವ್ಯವಹಾರ ನಡೆಸುಕೊಂಡು ಹೋಗುತ್ತಿದ್ದೆವು. ವಾಸುದೇವ ರೇಗೆಯವರು ಮರಣ ಹೊಂದುವವರೆಗೂ ಒಳ್ಳೆಯ ಆರೋಗ್ಯ ಸ್ಥಿತಿ ಹೊಂದಿದ್ದರು ಎಂದರೆ ಸಾಕ್ಷಿದಾರರು ಮಾನಸಿಕವಾಗಿ ಅಷ್ಟೊಂದು ಸ್ವಸ್ಥರಾಗಿರುವುದಿಲ್ಲ ಎಂದು ಹೇಳುತ್ತಾರೆ. ಸುಮಾರು 1 ವರ್ಷದಿಂದ ಅವರಿಗೆ ಹುಷಾರಿಲ್ಲದ ಕಾರಣ ತಮ್ಮ ಚೆಕ್ಕುಗಳನ್ನು ನಮಗೆ ಕೊಟ್ಟು ಹಣಕಾಸಿನ ವ್ಯವಹಾರ ಮಾಡಬೇಕೆಂದು ಹೇಳುತ್ತಿದ್ದರು. ಹೀಗೆ ವಾಸುದೇವ ರೇಗೆಯವರು ಸಹಿ ಮಾಡಿರುವ ಚೆಕ್ಕುಗಳನ್ನು ನಮಗೆ ಕೊಡುತ್ತಿರಲಿಲ್ಲ, ಆದರೆ ನಾವೇ ಅದನ್ನು ತೆಗೆದುಕೊಂದು ದುರ್ಬಳಿಕೆ ಮಾಡಿಕೊಂಡಿದ್ದೇವೆ ಎಂದು ಸೂಚಿಸುವ ನಿಮ್ಮ ಸಲಹೆ ಸರಿಯಲ್ಲ. ಅವರು ಮರಣ ಹೊಂದುರವವರೆಗೂ ಒಳ್ಳೆಯ ಆರೋಗ್ಯದಿಂದ ಇದ್ದರೂ ಎಂದರೆ ಸರಿಯಲ್ಲ.

ಸದರಿ ವಾಸುದೇವ ರೇಗೆಯವರು ದಿಃ 18.11.2015 ರಂದು ಬೆಳಗಿನ ಜಾವ ತೀರಿಹೋದರು ಎಂದರೆ ಸಮಯ ಗೊತ್ತಿಲ್ಲ ಆದರೆ ತೀರಿಹೋಗಿರುವ ವಿಷಯ ನಮಗೆ ಮಾರನೆ ದಿನ ಗೊತ್ತಾಯಿತು ಎಂದು ಹೇಳುತ್ತಾರೆ. ವಾಸುದೇವ ರೇಗೆಯವರದ್ದು ಕಾರ್ಪೋರೇಷನ್ ಬ್ಯಾಂಕಿನಲ್ಲಿ ಖಾತೆ ಹೊಂದಿದ್ದರು ಎಂದರೆ ಸರಿ. ವಾಸುದೇವ ರೇಗೆ ಇವರು ತೀರಿಹೋದ ದಿನಾಂಕದಂದೆ ಅವರ ಖಾತೆಯಿಂದ ರೂ. 38,000/- ಗಳನ್ನು ವಿಡ್ರಾವ್ ಮಾಡಿಕೊಂಡಿದ್ದೇವೆ ಎಂದು ಸೂಚಿಸುವ ನಿಮ್ಮ ಸಲಹೆ ಸರಿಯಲ್ಲ.

ಸುಭಾಷ ರಸ್ತೆಯಲ್ಲಿ ಶೆಡ್ಯೂಲ್ ನಂಃ 4 ರಿಂದ 7 ರಲ್ಲಿ ಇರುವ ಆಸ್ತಿಯ 1 ನೇ ಮಹಡಿಯನ್ನು ಬಾಡಿಗೆ ಕೊಟ್ಟಿದ್ದೇವೆ ಎಂದರೆ ಸರಿಯಲ್ಲ. ಸಾಕ್ಷಿಯು ಮಂದುವರೆದು ಅದನ್ನು ನಾವೇ ಬಳಸಿಕೊಳ್ಳುತ್ತಿದ್ದೇವೆ ಎಂದು ಹೇಳುತ್ತಾರೆ. ಅದರಲ್ಲಿ ನಾನು ಮತ್ತು ನಾಗರಾಜ ಎನ್ನುವರು ಬಸವೇಶ್ವರ ಖಾನಾವಳಿಯನ್ನು ನಡೆಸುತ್ತಿದ್ದೇವೆ. ಸದರಿ ಖಾನಾವಳಿ 6 ತಿಂಗಳ ಮುಂಚೆ ತೆಗೆದುಕೊಂಡಿದ್ದೇವೆ, ಇನ್ನೂ ಪರವಾನಿಗೆ ಪಡೆದುಕೊಂಡಿಲ್ಲ. ಸದರಿ ಅಂಗಡಿಯನ್ನು ನಾವು ಬಾಡಿಗೆ ಕೊಟ್ಟಿದ್ದರೂ ಸಹ ನಾವೇ ಖಾನಾವಳಿಯನ್ನು ನಡೆಸುತ್ತಿದ್ದೇವೆ ಎಂದರೆ ಸರಿಯಲ್ಲ. ನ್ಯಾಯಾಲಯದ ಆದೇಶದ ಮೇರೆಗೆ ಸದರಿ ಅಂಗಡಿಯ ಬಾಡಿಗೆ ನ್ಯಾಯಾಲಯದಲ್ಲಿ ತುಂಬ ಬೇಕಾಗುತ್ತದೆ ಎಂದು ಅದನ್ನು ತಪ್ಪಿಸಿಕೊಳ್ಳಲು ಸದರಿ ಅಂಗಡಿಯನ್ನು ಬಾಡಿಗೆ ಕೊಟ್ಟರೂ ಸಹ ನಾವೇ ಖಾನಾವಳಿಯನ್ನು ನಡೆಸುತ್ತಿದ್ದೇವೆ ಎಂದು ಸುಳ್ಳು ಹೇಳುತ್ತಿದ್ದೇವೆ ಎಂದರೆ ಸರಿಯಲ್ಲ. ಈ ವಿಷಯವನ್ನು ರುಜುವಾತು ಪಡಿಸಲು ನಾನು ಪಾರ್ಟನರ್ಶಿಪ ಡೀಡ್‌ನ್ನು ಹಾಜರು ಪಡಿಸಬಹುದು.

ನನ್ನ ತಂದೆ ಹಾಜರು ಪಡಿಸಿದ ವಾದ ಪತ್ರದಲ್ಲಿ ವಾಸುದೇವ ರೇಗೆ ರವರ ಮೃತ್ಯು ಪತ್ರದ ಬಗ್ಗೆ ಉಲ್ಲೇಖ ಮಾಡಿಲ್ಲ ಎಂದರೆ ಸರಿ. ಮೃತ್ಯು ಪತ್ರದ ಕುರಿತು ನನಗೆ ಯಾವುದೇ ವ್ಯಯಕ್ತಿತ ಮಾಹಿತಿ ಇಲ್ಲ ಎಂದರೆ ಸರಿಯಲ್ಲ, ಅದನ್ನು ಕೇಳಿ ತಿಳಿದಿದ್ದೇನೆ. ಮೃತ್ಯ ಪತ್ರದ ಪ್ರಕಾರ ನಾನು ಸಹ ಪ್ರಯೋಜನ ಹೊಂದಿರುತ್ತೇನೆ ಎಂದರೆ ಸರಿ. ಆದ್ದರಿಂದ ನಮ್ಮ ವಾದ ಪತ್ರದಲ್ಲಿ ಮೃತ್ಯು ಪತ್ರ ಖೊಟ್ಟಿ ಇದೆ ಎಂದು ಹೇಳುವ ಅವಶ್ಯಕತೆ ಇರಲಿಲ್ಲ ಎಂದರೆ ಸರಿಯಲ್ಲ. ನಾನು 1 ವರ್ಷ ಕಾಲದ ಹೊರಗಡೆ ಇರುವ ಕಾರಣ ನನಗೆ ಮೃತ್ಯು ಪತ್ರದ ಬಗ್ಗೆ ನನಗೆ ಅಷ್ಟೊಂದು ಗೊತ್ತಿಲ್ಲ ಎಂದರೆ ಸರಿ.

**ಪಾಟೀ ಸವಾಲುಃ 9 ನೇ ಪ್ರತಿವಾದಿ ಪರ ವಕೀಲರಿಂದ.**

ಪ್ರತಿವಾದ ಪರ ವಕೀಲರು ಹಾಜರಿದ್ದು ಸಮಯ ಕೋರಿದ ಕಾರಣ, ಸದರಿ ದಾವೆಯು 2006 ನೇ ಇಸವಿಯ ಇರುವ ಕಾರಣ ಪ್ರತಿವಾಯರಿಗೆ ಅಂತಿಮವಾಗಿ ಕಾಲಾವಕಾಶವನ್ನು ನೀಡಿ ಪಾಟೀ ಸವಾಲನ್ನು ಮುಂದುಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಅದೆ,**

**1 ನೇ ಹೆ ಹಿ ದಿ ನ್ಯಾ ಹಾಗೂ ಸಿಜೆಎಂ,**